# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕಲ್ಯಾಣ ವಿಭಾಗದ ಕಾರ್ಯನಿರ್ವಹಣೆ ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ವಿಭಾಗದ ವತಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರು, ಮಹಿಳೆಯರಿಗೆ ಹಾಗೂ ಅಂಗವಿಕಲರು, ಹಿರಿಯ ನಾಗರೀಕರು ಮತ್ತು ಸಾಮಾನ್ಯ ವರ್ಗದವರ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಏಳಿಗೆಗಾಗಿ ವಿವಿಧ ತರಬೇತಿ/ಸವಲತ್ತು/ಸಹಾಯಧನ ನೀಡುವಂತಹ ಕಾರ್ಯಕ್ರಮಗಳನ್ನು ಹಾಗೂ ಹಲವಾರು ವೈಯಕ್ತಿಕ ಪ್ರಯೋಜನೆ ಚಟುವಟಿಕೆಗಳ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಟಾನ ಮಾಡಲಾಗುತ್ತಿದೆ.

ಕಲ್ಯಾಣ ಕಾರ್ಯಕ್ರಗಳನ್ನು ಅನುಷ್ಟಾನಗೊಳಿಸಲು ಮಾನ್ಯ ಆಯುಕ್ತರವರು ಆಗಿಂದಾಗೆ ಅಧಿಕಾರ ಪ್ರತ್ಯಾಯೋಜನೆ ನೀಡುವಂತೆ, ಕೆ,ಎಂ,ಸಿ. ಕಾಯ್ದೆ, ಕೆ,ಸಿ,ಎಸ್,ಆರ್. ಕೆ,ಎಫ್,ಸಿ. ಕೆ,ಟಿ,ಸಿ. ಕೆ.ಟಿ,ಟಿ,ಪಿ ಇತ್ಯಾದಿ ಕಾಯ್ದೆ/ನಿಯಮಗಳಂತೆ ಮತ್ತು ಪಾಲಿಕೆ ಸಭೆ, ಸ್ಥಾಯಿ ಸಮಿತಿಗಳ ತೀರ್ಮಾನದಂತೆ, ಮಾನ್ಯ ಆಯುಕ್ತರವರು ಹಾಗು ಕರ್ನಾಟಕ ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶ/ನಿರ್ದೇಶನಗಳಂತೆ ಕಾರ್ಯನಿರ್ವಹಿಸುವುದು.

ಪಾಲಿಕೆಯ ಅರ್ಥಿಕ ವರ್ಷದ ಆಯವ್ಯಯ ಅನುಮೋದನೆಯಾದ ನಂತರ ಕಲ್ಯಾಣ ಕಾರ್ಯಕ್ರಮಗಳ ಲೆಕ್ಕ ಶೀರ್ಷಿಕೆಯಡಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಟಾನ ಗೊಳಿಸಲಾಗುವುದು.

ವಲಯ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು 2000 ರ (ಕೆ.ಟಿ.ಪಿ.ಪಿ.,) ನಿಯಮಗಳನ್ವಯ ಪತ್ರಿಕಾ ಪ್ರಕಟಣೆ ಮೂಲಕ ಟೆಂಡರ್ ಆಹ್ವಾನಿಸಿ ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿ ಫಲಾನುಭವಿಗಳಿಗೆ ಸೌಲಭ್ಯಗಳನ್ನು ನೀಡಲಾಗುವುದು.

### ಅಭ್ಯರ್ಥಿಗಳ ಅರ್ಹತೆಗಳು ಈ ಕೆಳಕಂಡಂತಿರುತ್ತದೆ.:-

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. (ಭಾರತ ಸರ್ಕಾರದ ಚುನಾವಣಾ ಆಯೋಗವು ಮತದಾನಕ್ಕೆ ನಿಗಧಿಪಡಿಸಿರುವ ವಾಸದ ದೃಢೀಕರಣದ ದಾಖಲೆಗಳಲ್ಲಿನ ಯಾವುದಾದರೂ ಒಂದರ ಪ್ರತಿ, ಹಾಲಿ ಜನ ಪ್ರತಿನಿಧಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ವಾಸ ಸ್ಥಳದ ದೃಢೀಕರಣ ಪತ್ರ ಅಥವಾ ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸದ ದೃಢೀಕರಣ ಪತ್ರ ಸಲ್ಲಿಸಬೇಕು.)
2) ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಸಲ್ಲಿಸಬೇಕು.
3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಆಯಾ ವರ್ಷದ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು. ಕುಟುಂಬದ ವಾರ್ಷಿಕ ಆಧಾಯದ ಮಿತಿ ರೂ.1.00 ಲಕ್ಷ ಮಿತಿ ಒಳಗಿರಬೇಕು.

4) ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದವರು, ಮಹಿಳೆಯರು ಹಾಗೂ ಸಾಮಾನ್ಯ ವರ್ಗದವರು ಆಯಾ ವರ್ಷದ ಆದಾಯ ಪ್ರಮಾಣ ಪತ್ರವನ್ನು ಒದಗಿಸಬೇಕು. ಕುಟುಂಬದ ವಾರ್ಷಿಕ ಆಧಾಯದ ಮಿತಿ ಸೌಲಭ್ಯ/ಸವಲತ್ತು/ಸಹಾಯಧನ ನೀಡುವ ಕಾರ್ಯಕ್ರಮಗಳಿಗೆ ರೂ.22,000 ಸಾವಿರ ಮೀತಿ ಒಳಗಿರಬೇಕು.

5) ತರಬೇತಿ ಕಾರ್ಯಕ್ರಮಗಳಲ್ಲಿ ಸೌಲಭ್ಯ ಪಡೆಯಲು ಹಿಂದುಳಿದ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷ ಮಿತಿ ಒಳಗಿರಬೇಕು ಮತ್ತು ಅಲ್ಪಸಂಖ್ಯಾತರ ವರ್ಗದವರ ಕುಟುಂಬದ ವಾರ್ಷಿಕ ಆದಾಯ ರೂ.2.00 ಲಕ್ಷಗಳ ಮಿತಿ ಒಳಗಿರಬೇಕು.

6) ಅಭ್ಯರ್ಥಿಯ ವಯೋಮಿತಿ 18 ವರ್ಷ ಮೇಲ್ಪಟ್ಟಿರಬೇಕು. (ಎಸ್.ಎಸ್.ಎಲ್.ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ/ಜನನ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.)

7) ಸದರಿ ಸೌಲಭ್ಯವನ್ನು ಸರ್ಕಾರ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪಡೆದಿರುವುದಿಲ್ಲವೆಂದು ದೃಡೀಕರಣವನ್ನು ರೂ.20/-ರ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಬೇಕು. ಈ ರೀತಿಯ ಸೌಲಭ್ಯವನ್ನು ಪಡೆದಿರುವವರು ಸಹಾಯ ಧನಕ್ಕೆ ಅರ್ಹರಾಗಿರುವುದಿಲ್ಲ.

8) ಅರ್ಜಿದಾರರ ಇತ್ತೀಚಿನ 3 ಭಾವ ಚಿತ್ರಗಳನ್ನು ಅರ್ಜಿಯ ಜೊತೆಯಲ್ಲಿ ನೀಡಬೇಕು.

## ಅಭ್ಯರ್ಥಿಗಳ ಆಯ್ಕೆ ವಿಧಾನ:-

1) ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

2) ಅರ್ಹ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರವರ ಕಛೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ ಸಂಬಂಧಪಟ್ಟ ವಲಯ ಕಛೇರಿಗಳಿಗೆ ನಿಗದಿತ ಸಮಯದೊಳಗಾಗಿ ಹಿಂದಿರುಗಿಸುವುದು. ಅವಧಿಯ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವಂತಿಲ್ಲ.

3) ಯಾವುದೇ ಆಕ್ಷೇಪಣೆಗಳಿಗೆ 7 ದಿನಗಳ ಕಾಲವಕಾಶ ನೀಡುವುದು. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸುವಂತಿಲ್ಲ.

4) ಆಕ್ಷೇಪಣೆಗಳನ್ನು ಆಯ್ಕೆ ಸಮಿತಿಯಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು.

5) ಶೇ.10ರಷ್ಟು ಹೆಚ್ಚುವರಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಆಯಾ ವಲಯಗಳು ಕಾಯ್ದುಕೊಳ್ಳುವುದು.

6) ಪ್ರಥಮ ಪಟ್ಟಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಈ ಸೌಲಭ್ಯವನ್ನು ಪಡೆಯದೇ ಇದ್ದಲ್ಲಿ ಹೆಚ್ಚುವರಿ ಪಟ್ಟಿಯಿಂದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.

ವಲಯವಾರು ಅಪರ/ಜಂಟಿ ಆಯುಕ್ತರ ನೇತೃತ್ವದ ಈ ಕೆಳಕಂಡ ಸಮಿತಿಯಿಂದ ಅಭ್ಯರ್ಥಿಗಳ ಆಯ್ಕೆ ಪೂರ್ಣಗೊಳಿಸಲಾಗುವುದು. ಟೆಂಡರ್ ಆಹ್ವಾನಿಸಲು, ಟೆಂಡರ್ ಪರಿಶೀಲಿಸಲು ಹಾಗೂ ಟೆಂಡರ್‌ನ್ನು ಅಂಗೀಕರಿಸಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

| | | |
|---|---|---|
| 1 | ವಲಯ ಅಪರ/ಜಂಟಿ ಆಯುಕ್ತರು | ಅಧ್ಯಕ್ಷರು |
| 2 | ವಲಯ ಉಪ ಆಯುಕ್ತರು | ಉಪಾಧ್ಯಕ್ಷರು |
| 3 | ಕೇಂದ್ರ ಕಛೇರಿಯ ಕಲ್ಯಾಣ ಇಲಾಖೆಯ ಓರ್ವ ಪ್ರತಿನಿದಿ | ಸದಸ್ಯರು |
| 4 | ಸಂಬಂಧಪಟ್ಟ ಸರ್ಕಾರ/ಸರ್ಕಾರದ ನಿಗಮ/ ಮಂಡಳಿ/ಸಂಸ್ಥೆಯ ಪ್ರತಿನಿಧಿಗಳು. | ಸದಸ್ಯರು |
| 5 | ಸಾಲಾ ಮಂಜೂರು ಮಾಡುವ ಬ್ಯಾಂಕ್‌ಗಳು/ ಹಣಕಾಸು ಸಂಸ್ಥೆಗಳ ಪ್ರತಿನಿದಿಗಳು. | ಸದಸ್ಯರು |
| 6 | ಸಂಬಂಧಪಟ್ಟ ಇಲಾಖೆಯ ಜಿಲ್ಲಾ/ತಾಲೂಕು ಅಧಿಕಾರಿ | ಸದಸ್ಯರು |
| 7 | ವಲಯದ ಕಲ್ಯಾಣಾಧಿಕಾರಿ | ಸದಸ್ಯ ಕಾರ್ಯದರ್ಶಿ |

ಎಲ್ಲಾ ಕಲ್ಯಾಣ ಕಾರ್ಯಕ್ರಮಗಳನ್ನು ಈ ಕೆಳಕಂಡ ವಲಯ ಕಚೇರಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ವಲಯ ಕಛೇರಿಗಳಿಂದ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ ಸಮಯದಲ್ಲಿ ಈ ಕೆಳಕಂಡ ವಲಯ ಕಛೇರಿಗಳಿಂದ ಅರ್ಜಿಪಡೆದು ಸಲ್ಲಿಸಬಹುದಾಗಿದೆ.

| ಕ್ರ.ಸಂ | ವಲಯ | ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 1 | ಪೂರ್ವ | ಅಪರ/ಜಂಟಿ ಆಯುಕ್ತರವರ ಕಛೇರಿ ಪೂರ್ವ ವಲಯ, ಮೇಯೋಹಾಲ್, ರೆಸಿಡೆನ್ಸಿ ರಸ್ತೆ, ಬೆಂಗಳೂರು – 01. | 22975801 |
| 2 | ಪಶ್ಚಿಮ | ಅಪರ/ಜಂಟಿ ಆಯುಕ್ತರವರ ಕಛೇರಿ ಪಶ್ಚಿಮ ವಲಯ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 20 | 22975648 |
| 3 | ದಕ್ಷಿಣ | ಅಪರ/ಜಂಟಿ ಆಯುಕ್ತರವರ ಕಛೇರಿ ದಕ್ಷಿಣ ವಲಯ, ಬಿ.ಬಿ.ಎಂ.ಪಿ., ವಾಣಿಜ್ಯ ಸಂಕೀರ್ಣ, 9ನೇ ಅಡ್ಡ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು – 11. | 22975701/ 26566365 |
| 4 | ಬೊಮ್ಮನಹಳ್ಳಿ | ಅಪರ/ಜಂಟಿ ಆಯುಕ್ತರವರ ಕಛೇರಿ ಬೊಮ್ಮನಹಳ್ಳಿ ವಲಯ, ಬೇಗೂರು ರಸ್ತೆ, ಬೊಮ್ಮನಹಳ್ಳಿ,ಬೆಂಗಳೂರು– 86 | 25732628 |

| | | | |
|---|---|---|---|
| 5 | ಮಹದೇವಪುರ | ಅಪರ/ಜಂಟಿ ಆಯುಕ್ತರವರ ಕಛೇರಿ ಮಹದೇವಪುರ ವಲಯ, ವೈಟ್‌ಫೀಲ್ಡ್ ರಸ್ತೆ, ಆರ್.ಹೆಚ್.ಬಿ. ಕಾಲೋನಿ ಪಕ್ಕ, ಮಹದೇವಪುರ, ಬೆಂಗಳೂರು. | 28511166 |
| 6 | ಯಲಹಂಕ | ಅಪರ/ಜಂಟಿ ಆಯುಕ್ತರವರ ಕಛೇರಿ ಯಲಹಂಕ ವಲಯ, ಬಳ್ಳಾರಿ ರಸ್ತೆ, ಬೆಂಗಳೂರು – 92 | 22975949 |
| 7 | ದಾಸರಹಳ್ಳಿ | ಅಪರ/ಜಂಟಿ ಆಯುಕ್ತರವರ ಕಛೇರಿ ದಾಸರಹಳ್ಳಿ ವಲಯ, ಹೆಸರಘಟ್ಟ ರಸ್ತೆ, ಎಂ.ಇ.ಐ., ಲೇಔಟ್, ಬಗಲುಗುಂಟೆ, ಬೆಂಗಳೂರು – 76. | 22975901 |
| 8 | ರಾಜ ರಾಜೇಶ್ವರಿ ನಗರ | ಅಪರ/ಜಂಟಿ ಆಯುಕ್ತರವರ ಕಛೇರಿ ರಾಜರಾಜೇಶ್ವರಿನಗರ ವಲಯ, ಐಡಿಯಲ್ ಹೋಂ ಟೌನ್ ಶಿಫ್, ರಾಜರಾಜೇಶ್ವರಿ ನಗರ,ಬೆಂಗಳೂರು–98 | 28604652 |

12/9

ಉಪ ಆಯುಕ್ತರು (ಕಲ್ಯಾಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ